ಕರ್ನಾಟಕ ವಿಧಾನಸಭೆ

ಸೋಮವಾರ 17ನೇ ಮಾರ್ಚ್ 2003ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 11.10 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು: (ಶ್ರೀ ಎಂ.ವಿ. ವೆಂಕಟಪ್ಪ) ರವರು,

ಪೀಠವನ್ನು ಅಲಂಕರಿಸಿದ್ದರು.

1. ಪ್ರಶ್ನೋತ್ತರಗಳು

(ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

ಪಶ್ಚಿಮ ಘಟ್ಟದ ಅಘನಾಶಿನಿ ಕಣಿವೆ ಪ್ರದೇಶದಲ್ಲಿ ವೃಕ್ಷ ಲಕ್ಷ ಆಂದೋಲನ

147 (1464) ಶ್ರೀ ಸದಾನಂದ ಗೌಡ ಡಿ.ಎ(ಪುತ್ತೂರು) : ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1) ಪಶ್ಚಿಮ ಘಟ್ಟದ ಮಹತ್ವದ ಜೀವನದಿಯಾಗಿರುವ ಅಘನಾಶಿನಿ ಕಣಿವೆ ಪ್ರದೇಶದಲ್ಲಿರುವ ಪರಿಸರ ಹಾಗೂ ಅಮೂಲ್ಯ ಜೀವ ಸಂಕುಲ ವಿನಾಶದ ಅಂಚಿನಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2) ವೃಕ್ಷಲಕ್ಷ ಆಂದೋಲನವು ಈ ಕುರಿತು ನಡೆಸಿದ ಅಧ್ಯಯನ ವರದಿ ಸರ್ಕಾರಕ್ಕೆ ತಲುಪಿದೆಯೇ? ವರದಿಯಲ್ಲಿನ ಪ್ರಮುಖ ಅಂಶಗಳು ಯಾವುವು?

3) ಈ ಪ್ರದೇಶಗಳಲ್ಲಿ ಸರ್ಕಾರ ಅಧ್ಯಯನ ಅಥವಾ ಸಂಶೋಧನೆ ನಡೆಸುವ ಬಗ್ಗೆ ಯಾವ ಕ್ರಮ ಕೈಗೊಂಡಿದೆ?

4) ವಿನಾಶದ ಅಂಚಿನಲ್ಲಿರುವ ಅಘನಾಶಿನಿ ಕಣಿವೆ ಪ್ರದೇಶದ ಪರಿಸರ ಹಾಗೂ ಅಮೂಲ್ಯ ಜೀವ ಸಂಕುಲ ಸಂರಕ್ಷಣೆಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಶ್ರೀ ಕೆ.ಹೆಚ್. ರಂಗನಾಥ್(ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):

1) ಇಲ್ಲ

2) ಇಂತಹ ಯಾವುದೇ ಅಧ್ಯಯನದ ವರದಿಯನ್ನು ಸರ್ಕಾರಕ್ಕೆ ನೀಡಿರುವುದಿಲ್ಲ.

3) ಈ ಪ್ರದೇಶಗಳಲ್ಲಿ ಯಾವುದೇ ನಿರ್ದಿಷ್ಟ ಅಧ್ಯಯನ ಅಥವಾ ಸಂಶೋಧನೆ ಕೈಗೊಂಡಿರುವುದಿಲ್ಲ. ಆದಾಗ್ಯೂ ಪಶ್ಚಿಮ ಘಟ್ಟ ಅಭಿವೃದ್ಧಿ ಯೋಜನೆಯಡಿಯಲ್ಲಿ ಪಾಂಡಿಚೇರಿಯ ಫ್ರೆಂಚ್ ಇನ್‌ಸ್ಟಿಟ್ಯೂಟ್ ಮೂಲಕ ಈ ಕೆಳಕಂಡ ಅಧ್ಯಯನ ನಡೆಸಲಾಗಿರುತ್ತದೆ.

1. ಬಯೋ ಡೈವರ್ಸಿಟಿ ಅಸೆಸ್‌ಮೆಂಟ್ ಇನ್ ಪರ್ಮನೆಂಟ್ ಪ್ಲಾಟ್ಸ್ ಇನ್ ಉತ್ತರ ಕನ್ನಡ (1998)

2. ಅಸೆಸ್‌ಮೆಂಟ್ ಅಂಡ್ ಕನ್‌ಸರ್‌ವೇಷನ್ ಆಫ್ ಫಾರೆಸ್ಟ್ ಬಯೋ ಡೈವರ್ಸಿಟಿ ಇನ್ ವೆಸ್ಟರ್ನ್ ಘಾಟ್ಸ್ ಆಫ್ ಕರ್ನಾಟಕ(1999).

3. ಡಾ|| ಜೆ.ಸಿ. ಉತ್ತುಂಗಿ ಇವರು ಅಣಶಿ ರಾಷ್ಟ್ರೀಯ ಉದ್ಯಾನವನದಲ್ಲಿ ಪಕ್ಷಿಸಂಕುಲದ ಬಗ್ಗೆ ವಿವರವಾದ ಅಧ್ಯಯನ ನಡೆಸಿರುತ್ತಾರೆ. (1994)

4. ಈ ಪ್ರದೇಶಗಳಲ್ಲಿ ಯಾವುದೇ ಹೊಸ ಜಲ ವಿದ್ಯುತ್ ಯೋಜನೆ ಅಥವಾ ಕೈಗಾರಿಕಾ ಸಂಕೀರ್ಣ ಇತ್ಯಾದಿಗಳು ಬರದಂತೆ ಇಲಾಖೆಯು ಎಚ್ಚರಿಕೆ ವಹಿಸುತ್ತಿದೆ. ಹಸಿರು ಮರಗಳನ್ನು ಕಡಿಯುತ್ತಿಲ್ಲ. ಹಾಲಿ ಇರುವ ಸಿಬ್ಬಂದಿಗಳ ಮೂಲಕ ಹಗಲು ಹಾಗೂ ರಾತ್ರಿ ಗಸ್ತುಗಳನ್ನು ಏರ್ಪಡಿಸಿ, ವನ್ಯಜೀವಿಗಳೂ, ಮರಗಿಡಗಳೂ ಇತ್ಯಾದಿ ಅರಣ್ಯ ಸಂಪತ್ತನ್ನು ಸಂರಕ್ಷಿಸಲಾಗುತ್ತಿದೆ.

ಶ್ರೀ ಡಿ.ವಿ ಸದಾನಂದಗೌಡ:- ಮಾನ್ಯ ಅಧ್ಯಕ್ಷರೇ, ಉತ್ತರವನ್ನು ಒದಗಿಸಿದ್ದಾರೆ. ಆದರೆ ಈಗಾಗಲೇ ಪತ್ರಿಕೆಗಳಲ್ಲಿ ವಿವಿಧ ಸಸ್ಯಶಾಸ್ತ್ರಜ್ಞರು ಮತ್ತು ಪರಿಸರವಾದಿಗಳು ನಡೆಸಿದಂತಹ ಅಧ್ಯಯನದ ವರದಿ ಹೊರಗೆ ಬಂದಿದೆ ಎಂದು ಪತ್ರಿಕೆಗಳಲ್ಲಿ ಬಂದಿದೆ. ಬಹುಶಃ ಡಿಸೆಂಬರ್ 28ರ ಕನ್ನಡಪ್ರಭದಲ್ಲಿ ವಿವರವಾಗಿ ಬಂದಿದೆ. ಸಸ್ಯಶಾಸ್ತ್ರಜ್ಞ ಕೇಶವ ಎಚ್ ಪೋರ್ಷೆ ಎಂಬುವವರು ನಡೆಸಿದ ಅಧ್ಯಯನದ ವರದಿಯನ್ನು ಬಿಡುಗಡೆಗೊಳಿಸಿದ್ದಾರೆ. ಅದರಲ್ಲಿ ಅವರು ಏನು ಹೇಳಿದ್ದಾರೆ ಎಂದರೆ, "ಈ ಅಘನಾಶಿನಿ ಕಣಿವೆ ಪ್ರದೇಶದಲ್ಲಿ ಪರಿಸರ ಹಾಗೂ ಅಮೂಲ್ಯ ಜೀವಸಂಕುಲ ವಿನಾಶದ ಅಂಚಿನಲ್ಲಿದ್ದು ಇವುಗಳ ರಕ್ಷಣೆಗೆ ತುರ್ತು ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು" ಎಂದು ಪತ್ರಿಕೆಯಲ್ಲಿ ಬಂದಿದೆ. ಮತ್ತೆ ಮಾತುಕತೆಗಳು ಕೂಡ ಕೇಳುತ್ತಾ ಇದ್ದೇವೆ. ನಾನು ಮಾನ್ಯ ಅರಣ್ಯ ಸಚಿವರಲ್ಲಿ ಒಂದು ವಿಚಾರವನ್ನು ಕೇಳಲು ಇಚ್ಛಿಪಡುತ್ತಿದ್ದೇನೆ. ಪ್ರಾಯಶಃ ಪರಿಸರ ಇವತ್ತು ಎಲ್ಲರ ಬಾಯಿಯಲ್ಲಿರುವ ಮಾತು. ಇವತ್ತು ಸಮಾಜ ಉಳಿಯಬೇಕಾದರೆ ಪರಿಸರ ರಕ್ಷಣೆಯಾಗಬೇಕು ಎಂದು ಹೇಳುವಂತಹುದು, ಇಂತಹ ಸಂದರ್ಭದಲ್ಲಿ ಆ ಪರಿಸರದ ಬಗ್ಗೆ ಯಾವುದೇ ಸಂಶೋಧನೆ ವರದಿಗಳು ಬಂದಾಗ, ಅಥವಾ ತಮ್ಮ ಗಮನಕ್ಕೆ ಬರದಿದ್ದಾಗಲೂ ಸಾರ್ವಜನಿಕ ವಲಯದಲ್ಲಿ ಬಂದಾಗ ಇದನ್ನು ಪರಿಶೀಲನೆ ಮಾಡುವುದು ತಮ್ಮ ಅಧಿಕಾರಿಗಳ ಕರ್ತವ್ಯವಲ್ಲವೇ? ಇಲ್ಲ ಇಲ್ಲ ಎಂದಿದ್ದಾರೆ. ಆದರೆ ಪತ್ರಿಕೆಗಳಲ್ಲಿ ಈ ರೀತಿ ಆಗಿದೆ ಎಂದು ಬಂದಿದೆ. ಇದನ್ನು ಯಾಕೆ ತಿಳಿದುಕೊಳ್ಳುವ ಪ್ರಯತ್ನಗಳನ್ನು ಮಾಡಲಿಲ್ಲ? ಎರಡನೆಯದಾಗಿ, ಈಗಾಗಲೇ ಗಣಿಗಾರಿಕೆಗೆ ಪಶ್ಚಿಮಘಟ್ಟದಲ್ಲಿ ನಾವು ಗಣಿಕಾರಿಕೆಗೆ ಅಲ್ಲಲ್ಲಿ ಅನುಮತಿ ಕೊಡುತ್ತೇವೆ ಎಂದು ಹೇಳಿಕೆ ಸರ್ಕಾರ ಮಾಡಿದೆ. ಇಂತಹ ಪರವಾನಗಿ ಕೊಡುವುದರಿಂದ ಇಂತಹ ಪ್ರದೇಶಗಳಿಗೆ ತೊಂದರೆ ಆಗುವುದಿಲ್ಲವೆ? ಇದಕ್ಕೆ ಸರ್ಕಾರ ಯಾಕೆ ಗಮನಿಸಲಿಲ್ಲವೆಂಬುದು ನನ್ನ ಪ್ರಶ್ನೆ.

ಶ್ರೀ ಕೆ.ಎಚ್ ರಂಗನಾಥ್:- ಮಾನ್ಯ ಅಧ್ಯಕ್ಷರೇ, ಸರ್ಕಾರದ ಗಮನಕ್ಕೆ ಬಂದಿದ್ದನ್ನು ಬಂದಿದೆ ಅಂತ ಹೇಳುತ್ತೇವೆ, ಬರದೇ ಇದ್ದುದನ್ನು ಇಲ್ಲ ಅಂತ ಹೇಳಿದರೆ ತಪ್ಪಾ?

ಶ್ರೀ ಡಿ.ವಿ ಸದಾನಂದ ಗೌಡ:- ಇಂತಹ ಮಹತ್ವದ ಪ್ರಶ್ನೆ ಬಗ್ಗೆ ತಿಳಿದುಕೊಳ್ಳುವಂತಹುದು ಸರ್ಕಾರದ ಜವಾಬ್ದಾರಿ ಹೌದೋ ಅಲ್ಲವೋ? ಈಗ ನಿಮ್ಮ ಗಮನಕ್ಕೆ ನಾನು ತಂದಿದ್ದೇನೆ, ಪತ್ರಿಕೆಗಳ ಮೂಲಕ ಎಲ್ಲರಿಗೂ ಗೊತ್ತಾಗಿದೆ.

ಶ್ರೀ ಕೆ.ಎಚ್ ರಂಗನಾಥ್:- ಅಧ್ಯಯನ ನಡೆಸಲು ಸರ್ಕಾರದ ವತಿಯಿಂದ ಯಾರೂ ನೇಮಕವಾಗಿಲ್ಲ. ಆದ್ದರಿಂದ ಅಧ್ಯಯನದ ವರದಿ ಬಗ್ಗೆ ಗಮನಹರಿಸಿಲ್ಲ. ಈಗೇನು ಮಾನ್ಯ ಸದಸ್ಯರು ಪ್ರಸ್ತಾಪಿಸಿದ್ದಾರೆ ಅದನ್ನು ತರಿಸಿ ನೋಡಿ ನಾನು ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇನೆ. ಮತ್ತೆ ಅರಣ್ಯ ಗಣಿ ಕೈಗಾರಿಕೆ ಬಗ್ಗೆ ಮಾನ್ಯ ಸದಸ್ಯರು ಪ್ರಸ್ತಾಪಿಸಿದ್ದಾರೆ. ಇದು ಆತಂಕದ ವಿಷಯ. ಸರ್ಕಾರ ಇದರ ಬಗ್ಗೆ ಗಮನಹರಿಸಿದೆ. ಮತ್ತೆ ತಮಗೂ ಈ ಸದನಕ್ಕೂ ಗೊತ್ತಿರುವ ಹಾಗೆ ಸುಪ್ರೀಂ ಕೋರ್ಟಿನ ತೀರ್ಪು ಬಂದ ಮೇಲೆ open duct mines ಗೆ ಮಾತ್ರ ಕೇಂದ್ರ ಸರ್ಕಾರ ಪರವಾನಗಿ ಕೊಡುತ್ತದೆ. ನಾವು ಅಂತಹುದನ್ನು ಮಾತ್ರ recommend

ಮಾಡಿ ಕಳುಹಿಸುತ್ತೇವೆ. ಆದರೆ ಹೊಸ ಪ್ರದೇಶದಲ್ಲಿ ಹೊಸದಾಗಿ ಗಣಿಗಾರಿಕೆ ಮಾಡಲು ಯಾವ ಅನುಮತಿಯನ್ನೂ ಕೊಡುವುದಿಲ್ಲ. ಕೊಡುತ್ತಾ ಇಲ್ಲ.

ಶ್ರೀ ಡಿ.ಎ ಸದಾನಂದಗೌಡ:- ಮಾನ್ಯ ಅಧ್ಯಕ್ಷರೇ, ಸಚಿವರ ಮುಂದುವರೆದ ಉತ್ತರದಲ್ಲಿ ಆದಾಗ್ಯೂ ಕೂಡ ಪಶ್ಚಿಮಘಟ್ಟ ಅಭಿವೃದ್ಧಿ ಯೋಜನೆ ಅಡಿಯಲ್ಲಿ ಪಾಂಡಿಚೇರಿಯ French Institute ಮೂಲಕ ಈ ಕೆಳಗಿನ ಅಧ್ಯಯನಗಳನ್ನು ನಡೆಸಲಾಗುತ್ತದೆ ಎಂದು ಹೇಳಿದ್ದಾರೆ. ಈಗಾಗಲೇ ಪಶ್ಚಿಮಘಟ್ಟದ ಅಭಿವೃದ್ಧಿ ಅಡಿಯಲ್ಲಿ Bio diversity assessment in permanent plats in Uttar Kannada, Assessment and conservation of forest bio diversity in western ghats of Karnataka ಎಂಬುದನ್ನೆಲ್ಲಾ 98-99ರಲ್ಲಿ ಮಾಡಿದ್ದೀರಿ. ಅದಲ್ಲದೆ ಡಾ।। ಜೆಸಿ ಉತ್ತುಂಗಿಯವರು ಅಣಶಿ ಉದ್ಯಾನವನದಲ್ಲಿ ಪಕ್ಷಿ ಸಂಕುಲದ ಬಗ್ಗೆ ವಿವರವಾದ ಅಧ್ಯಯನ ನಡೆಸುತ್ತಿದ್ದಾರೆ 94ರಿಂದಲೇ ಎಂದೂ ಹೇಳಿದ್ದೀರಿ. ಇವೆಲ್ಲ ಈಗ ಯಾವ ಹಂತದಲ್ಲಿವೆ? ಯಾವುದಾದರೂ ಇಂಟರಿಂ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆಯೇ? ಸಲ್ಲಿಸಿದ್ದರೆ ಅದರಲ್ಲಿ ಪರಿಸರ ಮತ್ತು ಅಮೂಲ್ಯ ಜೀವನಾಶ ಸಂಕುಲದ ಬಗ್ಗೆ ಏನು ಹೇಳಿದ್ದಾರೆ?

ಶ್ರೀ ಕೆ.ಎಚ್ ರಂಗನಾಥ್:- ನಾನು ವಿಚಾರ ಮಾಡಿ ಉತ್ತರವನ್ನು ತಮಗೆ ಬರೆದುಕಳುಹಿಸುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಮಾನ್ಯ ಅಧ್ಯಕ್ಷರೇ, ಅರಣ್ಯ ಸಚಿವರಲ್ಲಿ ನನ್ನದೊಂದು ವಿನಂತಿ ಅಂದರೆ ಜೊತೆಗೆ ಒಂದು ಉಪಪ್ರಶ್ನೆಯನ್ನೂ ಕೇಳುತ್ತಾ ಇದ್ದೇನೆ. ಮೊದಲನೆಯದಾಗಿ ಸರ್ಕಾರ ನೇಮಿಸಿದಂತಹ ಸಮಿತಿ ವರದಿ ಕೊಟ್ಟರೆ ಮಾತ್ರ ಅದು ಅಧಿಕೃತ ವರದಿ ಎಂಬುದು ಇಂತಹ ವಿಷಯಗಳಲ್ಲಾದರೂ ತಪ್ಪಬೇಕು. ಯಾವುದಾದರೂ ಪರಿಸರ ಸಂಘಟನೆಗಳು NGOs ಅಥವಾ ಬೇರೆ ಬೇರೆಯವರೂ ತಮ್ಮ ಅಭಿಪ್ರಾಯಗಳನ್ನು ವರದಿ ರೀತಿಯಲ್ಲಿ ಸರ್ಕಾರಕ್ಕೆ ಕಳುಹಿಸಿದಾಗ ಅದನ್ನೂ ಸಹ ಸರ್ಕಾರ ಗಮನಿಸುವಂತಹ ದೃಷ್ಟಿಕೋನ ಸರ್ಕಾರಕ್ಕೆ ಇರಬೇಕು, ಆ ರೀತಿಯಲ್ಲಿ ಸರ್ಕಾರ ಮುಂದಿನ ದಿನಗಳಲ್ಲಿ ಅಧಿಕಾರಿಗಳಿಗೆ ಆ ರೀತಿ ಮಾಹಿತಿ ಬಂದಿರುವುದನ್ನು ಅದೊಂದು ದಾಖಲೆ ರೀತಿಯಲ್ಲಿ ಕ್ರೋಢೀಕರಿಸಿ ಇಡುವುದಕ್ಕೆ ಬೇಕಾಗಿರುವಂತಹ ಸೂಚನೆಯನ್ನು ಮಾನ್ಯ ಸಚಿವರು ಕೊಡಬೇಕು ಎಂಬ ವಿನಂತಿ ಮಾಡಿಕೊಳ್ಳುತ್ತಾ, ಇವತ್ತು ನಮ್ಮ ಪಶ್ಚಿಮಘಟ್ಟ ಪ್ರದೇಶದಲ್ಲಿ ಅನೇಕ ಅತಿ ಸೂಕ್ಷ್ಮವಾದ ವನ್ಯಜೀವಿಗಳಿವೆ, ಪ್ರಾಣಿ ಸಂಕುಲಗಳಿವೆ. ಹಾಗಾಗಿ ಸರ್ಕಾರ ಇದನ್ನು fragile zone ಅಂತ ಮಾಡುವುದಕ್ಕೆ ಅಂದರೆ, ಅತಿಸೂಕ್ಷ್ಮ ಪ್ರದೇಶವನ್ನು ಕಾಯ್ದಿಡುವ ರೀತಿಯಲ್ಲಿ ಅಂತಹ ಒಂದು ಪ್ರಸ್ತಾವನೆಯನ್ನು ಕೇಂದ್ರಕ್ಕೇನಾದರೂ ಕಳುಹಿಸಿ ನಮ್ಮ ರಾಜ್ಯದಲ್ಲಿ ಬರುವ ಪಶ್ಚಿಮಘಟ್ಟ ಪ್ರದೇಶವನ್ನು fragile zone ಅಂತ ಮಾಡುವುದಕ್ಕೆ ಪ್ರಯತ್ನ ಮಾಡಿದೆಯೇ? ಕೇರಳದಲ್ಲಿ ಕೆಲವು ಭಾಗಗಳನ್ನು ಹೇಗೆ ಮಾಡಿದ್ದಾರೆ, ಹಾಗೆ ಕರ್ನಾಟಕದಲ್ಲಿ ಈ ಪಶ್ಚಿಮ ಘಟ್ಟ ಪ್ರದೇಶವನ್ನು fragile zone ರೀತಿಯಲ್ಲಿ ಸರ್ಕಾರ ಘೋಷಣೆ ಮಾಡುವುದಕ್ಕೆ ಯಾವುದಾದರೂ ಕ್ರಮ ತೆಗೆದುಕೊಂಡಿದೆಯೇ ಎಂಬುದನ್ನು ಹೇಳಬೇಕು. ಕಡೆಯದು, ಇಲ್ಲಿ ಕಾಡುಗಳ್ಳತನ ಅವ್ಯಾಹತವಾಗಿ ನಡೆದೇ ಇದೆ. ಹಾಗಾಗಿ ಸರ್ಕಾರ ಇಲಾಖೆಯನ್ನು ಅಲ್ಲಿ ಸ್ವಲ್ಪ ಶಕ್ತಿಶಾಲಿಗೊಳಿಸುವುದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತದೆ ಎಂಬುದನ್ನು ಹೇಳಬೇಕು. ಯಾಕೆಂದರೆ ಅದು ಅತಿ ಸೂಕ್ಷ್ಮವಾದ ಪ್ರದೇಶ ಇದೆ.

ಶ್ರೀ ಕೆ.ಎಚ್ ರಂಗನಾಥ್:- ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರೇನು ಸಲಹೆ ಕೊಟ್ಟಿದ್ದಾರೆ ಅದನ್ನು ಸರ್ಕಾರ ಗಮನದಲ್ಲಿಟ್ಟುಕೊಂಡು ಕ್ರಮ ತೆಗೆದುಕೊಳ್ಳಲು ಪ್ರಯತ್ನ ಮಾಡುತ್ತದೆ.

ಅತಿ ಸೂಕ್ಷ್ಮವಾದ ಪ್ರದೇಶವೆಂಬುದು, ಅದರಲ್ಲಿರುವ ಪ್ರಾಣಿಸಂಕುಲವನ್ನು ಉಳಿಸುವುದಕ್ಕೆ ಕ್ರಮ ತೆಗೆದುಕೊಳ್ಳಬೇಕೆಂದು ಅಭಿಪ್ರಾಯ ಏನು ಕೊಟ್ಟಿದ್ದಾರೆ ಅದನ್ನು ಸರ್ಕಾರ ಗಮನಕ್ಕೆ ತೆಗೆದುಕೊಳ್ಳುತ್ತದೆ ಅಂತ ಹೇಳುತ್ತಾ, ಮತ್ತೆ ಹೆಗಡೆಯವರಿಗೆ ಯಾವಾಗಲೂ ನೋಡಿದರೆ ಕಾಡು ಕಳ್ಳತನವಾಗಿದೆ ಎಂಬುದೇ ಅವರ ತಲೆಯಲ್ಲಿ ಇರುತ್ತದೆ ಅಂತ ಕಾಣುತ್ತದೆ. ಮಲಗಿದ್ದರೂ ಅದೇ ಎದ್ದರೂ ಅದೇ, ಓಡಾಡುತ್ತಿರುವಾಗಲೂ ಅದೇ ಅಂತ ಕಾಣುತ್ತದೆ. ಆದರೆ ಸರ್ಕಾರದಲ್ಲಿ ಹಾಗೆ ಆಗುತ್ತಾ ಇಲ್ಲ. ಸ್ವಲ್ಪ ಅಲ್ಲಿ ಇಲ್ಲಿ ಏನಾದರೂ ಆಗುತ್ತಾ ಇರಬಹುದು. ತಾವು ಹೇಳಿದ ಹಾಗೆ ಎಲ್ಲಿಯೂ ಆಗುತ್ತಾ ಇಲ್ಲ ಸ್ವಾಮಿ? ಎಲ್ಲೋ ಆಗುತ್ತಾ ಇರುತ್ತದೆ. ಆದರೆ ಅಧಿಕಾರಿಗಳು ಬುದ್ಧಿಪೂರ್ವಕವಾಗಿ ಹಾಗೆ ಆಗುವುದಕ್ಕೆ ಬಿಡುತ್ತಾ ಇಲ್ಲ. ಆದ್ದರಿಂದ ಇನ್ನು ಹೆಚ್ಚು ಅದನ್ನು ಬಿಗಿ ಮಾಡಬೇಕೆನ್ನುವ ಒಂದು ಅಭಿಪ್ರಾಯವನ್ನು ನಾನು ಒಪ್ಪುತ್ತೇನೆ. ಅದಕ್ಕೆ ಮಾನ್ಯತೆ ಕೊಡುತ್ತೇನೆ. ಮತ್ತೆ ವರದಿಗಳ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದರು. ವರದಿ ಎನ್ನುವ ಅರ್ಥದಲ್ಲಿ ನಾವು ಸರ್ಕಾರದ ಮಟ್ಟದಲ್ಲಿ ಬಳಸುವಾಗ ಸರ್ಕಾರವೇನಾದರೂ ವರದಿಗಳನ್ನು ಕೊಡುವುದಕ್ಕೆ ತಜ್ಞರ ಸಮಿತಿಯನ್ನು ನೇಮಕ ಮಾಡಿದ್ದರೆ ಅವರು ಕೊಟ್ಟಂಥ ವರದಿಯನ್ನು ಸರ್ಕಾರ ಗಮನಕ್ಕೆ ತೆಗೆದುಕೊಳ್ಳುತ್ತದೆಯೇ ವಿನಹಾ ಎನ್.ಜಿ.ಓ. ಕೊಟ್ಟರೆ ಅದನ್ನು ಗಮನಕ್ಕೆ ತೆಗೆದುಕೊಳ್ಳಬೇಕೆನ್ನುವ ಅಭಿಪ್ರಾಯ ಕೂಡ ಒಳ್ಳೆಯದೇ. ಏಕೆಂದರೆ ಸಲಹೆ ಯಾವುದೇ ಮೂಲದಿಂದ ಬಂದರೂ ಅದನ್ನು ನಾವು ಸ್ವೀಕಾರ ಮಾಡತಕ್ಕಂಥದ್ದು. ಅದರಲ್ಲಿರುವ ಸತ್ಯಾಸತ್ಯತೆಗಳನ್ನು ಅರ್ಹವಾಗಿರುವ ವಿಷಯಗಳನ್ನು ನಾವು ಗಮನಕ್ಕೆ ತೆಗೆದುಕೊಳ್ಳುವುದು ಒಳ್ಳೆಯದು. ಆ ದೃಷ್ಟಿಯಿಂದ ವಿಚಾರ ಮಾಡೋಣ.

ಶ್ರೀ ಆರಗ ಜ್ಞಾನೇಂದ್ರ:- ಮಾನ್ಯ ಅಧ್ಯಕ್ಷರೇ, ನಮ್ಮ ಮಂತ್ರಿಗಳು ಇಲಾಖೆಯನ್ನು ಬಹಳ ಚೆನ್ನಾಗಿ ಸಮರ್ಥಿಸಿಕೊಂಡಿದ್ದಾರೆ. ಹೆತ್ತವರಿಗೆ ಹೆಗ್ಗಣ ಮುದ್ದಲ್ಲವೇ?

ಅಧ್ಯಕ್ಷರು:- ಅದು ಅವರ ಕರ್ತವ್ಯ

ಶ್ರೀ ಆರಗ ಜ್ಞಾನೇಂದ್ರ:- ಹೌದು ಸಾರ್; ಖಂಡಿತ. ಆ ಕರ್ತವ್ಯವನ್ನು ಬಹಳ ಚೆನ್ನಾಗಿ ಮಾಡುತ್ತಿದಾರೆ. ಮಾನ್ಯ ಹೆಗಡೆಯವರು ಹೇಳಿದ ಹಾಗೆ ಆ ಪ್ರದೇಶ ಸೂಕ್ಷ್ಮ ಇರಬಹುದು. ಆದರೆ ನಿಮ್ಮ ಅಧಿಕಾರಿಗಳು ಸೂಕ್ಷ್ಮ ಇಲ್ಲವೆಂದು ಅವರು ಹೇಳುವುದು. ನಿಮ್ಮ ಅಧಿಕಾರಿಗಳನ್ನು ನಿಮ್ಮ ಇಲಾಖೆಯನ್ನು ಸೂಕ್ಷ್ಮ ಮಾಡಿ, ಎಂದು. ನಮ್ಮ ಮಲೆನಾಡಿನಲ್ಲಿ ನಾವು ಶಾಂತಿಯಿಂದ ನಿದ್ದೆ ಮಾಡುವ ಪರಿಸ್ಥಿತಿಯಲ್ಲಿ ಇಲ್ಲ ಸಾರ್. ಈ ಕಳ್ಳನಾಟಾ ಕಡಿದವರು, ಗಂಧ ಕಡಿದವರು, ಈಗ ಜನರ ಮೈಮೇಲೆ ಕೊಚ್ಚುವುದು ಕೊರೆಯುವುದು ಈಗ ಶುರು ಮಾಡಿಬಿಟ್ಟಿದ್ದಾರೆ. ಹಾಗಾಗಿ ನಿಮ್ಮ ಇಲಾಖೆ ಸಫಲವಾಗಿದ್ದರೆ, ಸರಿಯಾಗಿದ್ದರೆ, ಶಕ್ತಿಶಾಲಿಯಾಗಿದ್ದರೆ ತಾವೇನು ಸಮರ್ಥನೆ ಮಾಡಿಕೊಳ್ಳುತ್ತಿದ್ದೀರಿ ಅದನ್ನು ಒಪ್ಪಬಹುದಿತ್ತು. ತಾವೇನು ಈಗ ಬುದ್ಧಿಪೂರ್ವಕವಾಗಿ ಸಮರ್ಥನೆ ಮಾಡಿಕೊಳ್ಳುತ್ತಿದ್ದೀರಿ, ಆ ಮಟ್ಟದಲ್ಲಿ ನಿಮ್ಮ ಇಲಾಖೆ ಶಕ್ತಿಶಾಲಿಯಾಗಿ ಸತ್ವಶಾಲಿಯಾಗಿದ್ದರೆ ನಮ್ಮ ಮಲೆನಾಡಿನಲ್ಲಿ ಸ್ವಲ್ಪ ಇರುವ ಕಾಡನ್ನಾದರೂ ಉಳಿಸಿ ಸ್ವಾಮಿ ಎಂದು ನಾವು ವಿನಂತಿ ಮಾಡಿಕೊಳ್ಳುತ್ತಿರುವುದು.

ಶ್ರೀ ಕೆ.ಹೆಚ್. ರಂಗನಾಥ್:- ಮಾನ್ಯ ಅಧ್ಯಕ್ಷರೇ, ಮಾನ್ಯ ಜಗದೀಶ್ ಶೆಟ್ಟರ್‌ರವರ ನೇತೃತ್ವದಲ್ಲಿ ಏನಾದರೂ ಸರ್ಕಾರ ಅವರ ಪಕ್ಷ ಅಧಿಕಾರಕ್ಕೆ ಬಂದರೆ ತಾವು ತಮ್ಮ ಪಕ್ಷದವರೂ ಕೂಡ ಇದೇ ತರಹ ಸಮರ್ಥನೆ ಮಾಡಿಕೊಳ್ಳುತ್ತೀರಿ. ಬರುವುದಿಲ್ಲ, ಆ ಮಾತು ಬೇರೆ. ಅಧಿಕಾರಕ್ಕೇನಾದರೂ ಬಂದರೆ...

ಶ್ರೀ ಅರಗ ಜ್ಞಾನೇಂದ್ರ:- ಬಹಳ ಶಕ್ತಿಶಾಲಿ ಮಾಡುತ್ತೇವೆ.

ಶ್ರೀ ಕೆ.ಹೆಚ್. ರಂಗನಾಥ್:- ಮಾಡುತ್ತಿದ್ದೀರಿ. ನಮಗೆ ಈಗ ಗೊತ್ತಾಗುತ್ತಿದೆಯಲ್ಲಾ. ನಿಮ್ಮ ಕೈಗೇನು ಸಣ್ಣ ಸರ್ಕಾರವನ್ನು ಕೊಟ್ಟಿದ್ದೇವೆಯೇ? ಕೇಂದ್ರ ಸರ್ಕಾರವನ್ನೂ ಕೊಟ್ಟಿದ್ದೇವೆ.

ಶ್ರೀ ಡಿ.ವಿ ಸದಾನಂದಗೌಡ:- ಮಾನ್ಯ ಅಧ್ಯಕ್ಷರೇ, ನಾನು ಕೇಳುವಂಥದ್ದು ಈಗ ಮಂತ್ರಿಗಳಿಗೆ ಕಾಳಜಿ ಇಲ್ಲ. ಮತ್ತೊಂದು ಇಲ್ಲ ಎಂದು ನಾನು ಹೇಳುತ್ತಿಲ್ಲ. ಆದರೆ ನಾನು ಹೇಳುವಂಥದ್ದು ಏನೆಂದರೆ ಪರಿಸರದ ಬಗ್ಗೆ ಇವತ್ತು ನೂರಾರು ಸಂಘಟನೆಗಳು ಇವೆ. ಕೆಲವು ಸ್ವಾರ್ಥಕ್ಕೆ ಇರಬಹುದು; ಮತ್ತೊಂದಕ್ಕೆ ಇರಬಹುದು; ಇಲ್ಲವೆಂದು ನಾನು ಹೇಳುವುದಿಲ್ಲ. ಹಲವಾರು ಸಂಘಟನೆಗಳು ಬೇರೆ ಬೇರೆ ರೀತಿಯಲ್ಲಿ ವಿದೇಶಿ ಮೂಲಗಳಿಂದ ಬೇರೆ ಬೇರೆ ವ್ಯವಸ್ಥೆಗಳನ್ನು ಪಡೆದುಕೊಂಡೂ ಕೂಡ ಏನಾದರೂ ಮಾಡುವಂಥ ಪರಿಸರ ಸಂಘಟನೆಗಳಿರಬಹುದು. ಆದರೆ ವಸ್ತುನಿಷ್ಠ ವಿಚಾರವನ್ನು ತಿಳಿದುಕೊಳ್ಳುವಂಥ ಸಂದರ್ಭಗಳು, ವಿಶೇಷವಾಗಿ ಹಲವಾರು ವರದಿಗಳು ಈ ರೀತಿ ಬಂದಾಗ ನಾನು ಸರ್ಕಾರವನ್ನು ಆಗ್ರಹಪಡಿಸುವುದು ಇಷ್ಟೆ. ಪತ್ರಿಕೆಗಳಲ್ಲಿ ಇಂಥ ವರದಿಗಳೆಲ್ಲಾ ಬಿಡುಗಡೆಯಾಗಿದೆ ಎಂದು ಯಾವುದಾದರೂ ತಮ್ಮ ಗಮನಕ್ಕೆ ಬಂದಾಗ, ದಯವಿಟ್ಟು ತಮ್ಮ ಅಧಿಕಾರಿಗಳಲ್ಲಿ ಸೂಕ್ಷ್ಮವಾದಂಥ ವಿಚಾರ ಇದು. ಪರಿಸರ ಸಂರಕ್ಷಣೆ ಎಂದರೆ ಅತ್ಯಂತ ಸೂಕ್ಷ್ಮವೆಂದು ತಾವೇ ಒಪ್ಪಿಕೊಂಡಿದ್ದೀರಿ; ಮತ್ತು ಇದು ಆಗಬೇಕೆನ್ನುವ ಮುತುವರ್ಜಿಯನ್ನು ಕೂಡ ವಹಿಸಿದ್ದೀರಿ. ಇಲ್ಲ ಎಂದು ನಾನು ಖಂಡಿತಾ ಹೇಳುತ್ತಿಲ್ಲ. ಆದರೆ ಇಂಥ ಸಂದರ್ಭಗಳಲ್ಲಿ ಈಗಾಗಲೇ ವೃಕ್ಷಲಕ್ಷ ಆಂದೋಲನ ಎಂಬ ಸಮಿತಿ, ಮಾನ್ಯ ಅನಂತ ಹೆಗಡೆಯವರ ನೇತೃತ್ವದಲ್ಲಿ ವ್ಯಾಪಕವಾದಂಥ ಒಂದು ಪರಿಸರದ ವಿಚಾರವನ್ನು ಈಗಾಗಲೇ ಹಮ್ಮಿಕೊಂಡಿದೆ ಎಂದು ಹೇಳಿ ಎಲ್ಲಾ ಕಡೆ ನಾವು ಕೇಳಿದ್ದೇವೆ. ದಯವಿಟ್ಟು ಸರ್ಕಾರ ಈ ವೃಕ್ಷಲಕ್ಷ ಆಂದೋಲನದ ವರದಿಯನ್ನು ತರಿಸಿಕೊಂಡು ಪರಿಶೀಲನೆ ಮಾಡಬೇಕೆನ್ನುವ ಒಂದು ವಿನಂತಿಯನ್ನು ಸರ್ಕಾರಕ್ಕೆ ಮಾಡುವಂಥ ಪ್ರಯತ್ನವನ್ನು ನಾನು ಮಾಡುತ್ತಿದ್ದೇನೆ.

ಶ್ರೀ ಕೆ.ಹೆಚ್. ರಂಗನಾಥ್:- ಮಾನ್ಯ ಅಧ್ಯಕ್ಷರೇ, ನಾನು ಹೇಳಿದೆ, ಸರ್ಕಾರದ ಗಮನಕ್ಕೆ ಇಂಥ ವಿಚಾರಗಳು ಬೇಕು. ಅದಕ್ಕಾಗಿ ಪತ್ರಿಕೆಯಲ್ಲಿ ಬಂದದ್ದನ್ನು ಎಲ್ಲಾ ನಾವು ನೋಡಲೇಬೇಕಾಗುತ್ತದೆ, ನೋಡಿದರೆ ಬಹಳ ಒಳ್ಳೆಯದಾಗುತ್ತದೆ. ಆಡಳಿತಕ್ಕೆ ಹೆಚ್ಚು ಸಹಾಯ ಕೂಡ ಆಗುತ್ತದೆ ಎನ್ನತಕ್ಕ ಅಭಿಪ್ರಾಯವನ್ನು ನಾನು ಒಪ್ಪುತ್ತೇನೆ.

ಮೈಸೂರು ಜಿಲ್ಲೆಯಲ್ಲಿರುವ ಕೈಗಾರಿಕೆಗಳಲ್ಲಿ ಲಾಕ್‌ಔಟ್ ಘೋಷಣೆ

184 (1944) ಶ್ರೀ ಎ.ಎಸ್.ಗುರುಸ್ವಾಮಿ(ಚಾಮುಂಡೇಶ್ವರಿ) : ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕಾರ್ಮಿಕ ಇಲಾಖೆಯ ಅನುಮತಿ ಪಡೆಯದೇ 11.10.99ರ ನಂತರ ಮೈಸೂರು ಜಿಲ್ಲೆಯಲ್ಲಿ ಎಷ್ಟು ಕೈಗಾರಿಕೆಗಳು ಅನಧಿಕೃತವಾಗಿ ಲಾಕ್ ಔಟ್ ಘೋಷಿಸಿವೆ?

ಆ) ಎಷ್ಟು ಪ್ರಕರಣಗಳಲ್ಲಿ ಕೈಗಾರಿಕೆ ಪುನರ್ ಆರಂಭಿಸಲು ಕ್ರಮ ತೆಗೆದುಕೊಳ್ಳಲಾಗಿದೆ?

ಇ) ಎಷ್ಟು ಪ್ರಕರಣಗಳಲ್ಲಿ ದಂಡ ವಿಧಿಸಲಾಗಿದೆ; ವಸೂಲು ಮಾಡಿದ ಹಣ ಎಷ್ಟು?

ಈ) ಕಾರ್ಮಿಕರ ಹಿತಾಸಕ್ತಿ ಕಾಪಾಡಲು ಹಾಗೂ ಅನಧಿಕೃತ ಲಾಕ್ ಔಟ್ ತಡೆಯಲು ಸರ್ಕಾರ ಕೈಗೊಂಡಿರುವ ಕ್ರಮ ಏನು?